ಚಿತ್ರಪಟ ಕಥನ

# ಕೆಂಪುಚೇಳಿನ ಪ್ರಣಯಕೇಳಿ



**ಸಾಮಾನ್ಯವಾಗಿ ಕಲ್ಲುಗಳ ಮರೆಯಲ್ಲಿ ನಡೆಯುವ ಚೇಳುಗಳ ಪ್ರಣಯಕೇಳಿ, ಗ್ವಾರಪ್ಪನಗುಡ್ಡದಲ್ಲಿ ಕಣ್ಣಿಗೆ ಬಿತ್ತು. ಪ್ರೇಮ ನಿವೇದನೆ, ನೃತ್ಯ, ಪ್ರಣಯ ಚೇಷ್ಟೆ, ಆಲಿಂಗನ ಇವೆಲ್ಲವೂ ಕ್ಯಾಮೆರಾದಲ್ಲಿ ಸೆರೆಯಾದವು.**

**■ ಶಶಿಧರಸ್ವಾಮಿ ಆರ್. ಹಿರೇಮಠ**

ಅದು ಗ್ವಾರಪ್ಪನಗುಡ್ಡದ ನರಪಿಳ್ಳೆಯೂ ಕಾಣದ ಕುರುಚಲು ಕಾಡು. ಹಕ್ಕಿಗಳ ಕಲರವ ಬಿಟ್ಟರೆ ಅರಣ್ಯಮೌನ. ಸುಳಿಯುವ ತಂಗಾಳಿ ಮೈ ಮನಕೆ ಮುದ ನೀಡುತ್ತಿತ್ತು. ಅಲ್ಲಿರುವ ಮ್ಯಾಕ್ರೊ ಜೀವಿಗಳಿಗಾಗಿ ಹುಡುಕಾಟ ಶುರುಮಾಡಿದೆವು. ಎರಡು ತಾಸು ಕಳೆದರೂ ಕೀಟಗಳ ದರ್ಶನವಿಲ್ಲ. ಅಲೆದಾಡಿ ಸುಸ್ತಾಗಿ ವಿಶ್ರಾಂತಿಗೆಂದು ಅಲ್ಲೇ ಹರಡಿಕೊಂಡಿದ್ದ ಬಂಡೆಗಲ್ಲಿನ ಮೇಲೆ ಕುಳಿತೆವು.

ಸೂರ್ಯ ಬಾನಂಚಿಗೆ ಜಾರುತ್ತಿದ್ದ. ದೂರದಲ್ಲಿ ರೈತರು ಕಾಯಕ ಮುಗಿಸಿ ಎತ್ತು ಚಕ್ಕಡಿಗಳ ಸಮೇತ ಮನೆಯತ್ತ ತೆರಳುತ್ತಿದ್ದರು.

ಏನೂ ದಕ್ಕಲಿಲ್ಲವೆಂದು ಹೊರಡಬೇಕೆನ್ನುವಷ್ಟರಲ್ಲೇ, ನಾವು ಕುಳಿತ ಬಂಡೆಗಲ್ಲಿನ ಸಂಧಿಯಿಂದ ಕೆಂಪುಚೇಳೊಂದು ಮೇಲೆ ಬಂತು. ಅದರ ಹಿಂದೆಯೇ ಮತ್ತೊಂದು ಕೆಂಪುಚೇಳು! ಅವು ನಿಧಾನ ನಡೆದು ನಮ್ಮತ್ತಲೇ ಬರತೊಡಗಿದವು. ತಕ್ಷಣ ಬಂಡೆಗಲ್ಲಿನಿಂದ ಕೆಳಗಿಳಿದು ನಿಂತು ನೋಡ ತೊಡಗಿದೆವು. ಮುಂದೆ ಸಾಗಿದ ಅವು ಬಂಡೆಗಲ್ಲಿನ ಸೀಳಿನಲ್ಲಿ ಇಳಿದು ಮಾಯವಾದವು. ‘ಇವು ಪ್ರೇಮಿಗಳಿರಬೇಕು, ಈಗ ತಾನೆ ಗಾಂಧರ್ವ ವಿವಾಹ ನಡೆದು, ಮೊದಲ ರಾತ್ರಿಗೆ ತಯಾರಿ ನಡೆದಿರಬೇಕು’ ಎಂದೆ. ಜೊತೆಗಿದ್ದ ಗೆಳೆಯ ಮಾಲತೇಶ, ‘ಹೌದೇ! ಇವತ್ತು ಇಲ್ಲೇ ಕಾಯೋಣವೇ’ ಅಂದ. ‘ಕತ್ತಲಾಗುತ್ತಾ ಬಂತು, ನಾಳೆ ನೋಡೋಣ’ ಎಂದೆ. ಮನೆಗೆ ಮರಳಿದೆವು.

ಮರುದಿನದಿಂದ ಗ್ವಾರಪ್ಪನಗುಡ್ಡಕ್ಕೆ ಹೋಗಿ ಕೆಂಪುಚೇಳುಗಳನ್ನು ಹುಡುಕುವುದು, ಅವು ಕಾಣದಿದ್ದಾಗ ಮನೆಗೆ ಮರಳುವುದೇ ಕಾಯಕವಾಗಿತ್ತು. ಅವುಗಳ ಪ್ರಣಯ ದೃಶ್ಯಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯಬೇಕೆಂದು ಮತ್ತೆ ಮತ್ತೆ ಪ್ರಯತ್ನ ನಡೆಸುತ್ತಲೇ ಇದ್ದೆವು. ಅವತ್ತು ಏಳನೇ ದಿನ. ಮುಂಜಾನೆ ಎದ್ದು ಬೈಕೇರಿ ಗ್ವಾರಪ್ಪನ ಗುಡ್ಡಕ್ಕೆ ಹೋಗಿದ್ದಾಯಿತು. ನಾನು ದೊಡ್ಡದಾದ ಬಂಡೆಗಲ್ಲಿನತ್ತ ನಡೆದೆ. ಅಚ್ಚರಿ ಎಂಬಂತೆ ಅಲ್ಲಿ ಎರಡು ಕೆಂಪುಚೇಳುಗಳು ಕಾಣಿಸಿಕೊಂಡವು.

ಅವು ಹಿಂದೆ ಮುಂದೆ ಓಲಾಡಿ ನೃತ್ಯ ಮಾಡುತ್ತಾ ಬಂಡೆಗಲ್ಲಿನ ತುಂಬಾ ಓಡಾಡತೊಡಗಿದವು. ನಾವು ಅವುಗಳತ್ತ ಮ್ಯಾಕ್ರೊ ಲೆನ್ಸ್ ಫೋಕಸ್ ಮಾಡಿ ಕ್ಲಿಕ್ ಮಾಡಬೇಕೆನ್ನುವಷ್ಟರಲ್ಲಿ ಬದಿಗೆ ಸರಿದು ಬಿಡುತ್ತಿದ್ದವು. ಏನೇನೋ ಕಸರತ್ತು ಮಾಡಿ, ಅವುಗಳ ಪ್ರೇಮನಿವೇದನೆ, ಪ್ರಣಯಚೇಷ್ಟೆ, ಒಂದನ್ನೊಂದು ಬಾಚಿ ತಬ್ಬುವ ಪರಿ, ನಾಚಿ ಓಡುವ ಹೆಣ್ಣಿನ ಬಾಲ ಹಿಡಿದು ಬರಸೆಳೆಯುವ ಗಂಡಿನ ತುಂಟತನ... ಇಂಥ ದೃಶ್ಯಗಳನ್ನು ಕ್ಯಾಮೆರಾಗೆ ತುಂಬಿಸಿಕೊಂಡೆವು. ಕೆಲವೊಮ್ಮೆ ಫೋಟೊ ಹಿಡಿಯುತ್ತಿದ್ದಾಗ ಚೇಳುಗಳು ನಮ್ಮ ಕೈ ಹತ್ತಿರವೇ ಬಂದುಬಿಡುತ್ತಿದ್ದವು. ಹಿಂದೆ ಸರಿಯುತ್ತಾ, ಕೂರುತ್ತಾ, ಥಟ್ಟನೆ ಮೇಲೇಳುತ್ತಾ ಅವುಗಳ ಹಲವು ಭಂಗಿಗಳನ್ನು ಸೆರೆಹಿಡಿದಿದ್ದೆವು.

## ಬರೀ ಚುಂಬನವಲ್ಲ...

ಚೇಳುಗಳು ಅಗಲವಾದ ಬಂಡೆಗಲ್ಲಿನ ಮೇಲೆ ಹಿಂದೆ ಮುಂದೆ ನಡೆದಾಡುವುದು, ಕೊಂಡಿಗಳನ್ನು ಹಿಡಿದುಕೊಳ್ಳುವುದು, ಅವೆರಡೂ ಅಪ್ಪಿ ಮುದ್ದಾಡಿದಂತೆ ಕಾಣಿಸುತ್ತಿತ್ತು. ಚೇಳುಗಳು ಮಿಲನ ಪೂರ್ವದಲ್ಲಿ ನೃತ್ಯ ಮಾಡುತ್ತವೆ. ಗಂಡು–ಹೆಣ್ಣು ಫೆರೋಮೋನ್ ರಾಸಾಯನಿಕವನ್ನು ಹೊರಸೂಸಿ ತಮ್ಮ ಇರುವಿಕೆಯ ಸುಳಿವು ನೀಡುತ್ತವೆ. ಆಮೇಲೆ ನಾಟ್ಯವಾಡುತ್ತಾ ಪರಸ್ಪರ ಚುಂಬಿಸುತ್ತವೆ. ಈ ವೇಳೆ, ಅವುಗಳ ಬಾಲಗಳು ಮೇಲೆ ಬಂದು ಬಾಗಿ ಹೃದಯಾಕಾರ ರೂಪುಗೊಂಡಂತೆ ಕಾಣುತ್ತದೆ.

ನಾವು ನೋಡುತ್ತಿರುವಾಗಲೇ, ನೃತ್ಯವನ್ನು ಸಮಾಪ್ತಿಗೊಳಿಸಿ ಒಂದಕ್ಕೊಂದು ಮುಖಾಮುಖಿಯಾಗಿ ನಖಗಳನ್ನು ಹಿಡಿದಪ್ಪಿ ವಿಶ್ರಾಂತವಾದಂತೆ ಕಂಡವು. ಚುಂಬನದಲ್ಲೇ ಮಿಲನ ಕ್ರೀಡೆ ಮುಗಿದುಹೋಯಿತೆ? ಆಶ್ಚರ್ಯದಿಂದಲೇ ಇನ್ನಷ್ಟು ಸೂಕ್ಷ್ಮವಾಗಿ ಗಮನಿಸಿದೆವು.

ಚೇಳುಗಳಲ್ಲಿ, ಗಂಡು ವೀರ್ಯವನ್ನು ನೇರವಾಗಿ ಲೈಂಗಿಕ ಅಂಗದಿಂದ ಹೆಣ್ಣಿಗೆ ವರ್ಗಾಯಿಸುವುದಿಲ್ಲ. ಬದಲಿಗೆ ಪೂರ್ವ ಕಿಬ್ಬೊಟ್ಟೆಯ ವಕ್ಷ (ಎದೆಮೂಳೆ) ಭಾಗದಲ್ಲಿರುವ, ಕವಚ ಹೊಂದಿರುವ ಜನನಾಂಗ ದಿಂದ ಸಿಲಿಂಡರಿನಾಕಾರದ ಶುಕ್ಲಾಣುಗೋಲಕ ಅಥವಾ ಶುಕ್ಲಾಣುಗುಳಿಗೆ (ಸ್ಪರ್ಮಟೊಫೋರ್) ಅನ್ನು ನೆಲದ ಮೇಲೆ ಹೊರಚೆಲ್ಲುತ್ತದೆ. ಈ ಶುಕ್ಲಾಣುಗೋಲಕ ಸೂಕ್ಷ್ಮವಾಗಿ ಗಮನಿಸಿದರೆ ಮಾತ್ರ ಕಾಣುತ್ತದೆ. ಇದು ಜಿಗುಟುಜಿಗುಟಾಗಿದ್ದು, ವೀರ್ಯಾಣು (ಸ್ಪರ್ಮಟೊಜೋವಾ) ಹೊಂದಿರುವ ಬಾಹ್ಯ ರಚನೆಯಾಗಿದೆ.

ಗಂಡು, ಹೆಣ್ಣನ್ನು ಈ ಶುಕ್ಲಾಣುಗೋಲಕದತ್ತ ಬರುವಂತೆ ಮಾಡುತ್ತದೆ. ಬಾರದಿದ್ದಾಗ ಎಳೆದುಕೊಂಡು ಬರುತ್ತದೆ. ಸನಿಹಕ್ಕೆ ಬಂದ ಹೆಣ್ಣು ಆ ಶುಕ್ಲಾಣುಗುಳಿಗೆಯನ್ನು ತನ್ನ ಪೂರ್ವ ಕಿಬ್ಬೊಟ್ಟೆಯ ವಕ್ಷಾ ಭಾಗದಲ್ಲಿನ ಅಂಡಾಣು

